ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2 ನೇ ಪ್ರತಿವಾದಿ ಪರ ವಕೀಲರಿಂದ

1. ಉಳಿದ ವಾದಿಯರ ಪರ ನಾನು ಸಾಕ್ಷ್ಯ ನುಡಿಯಲು ನಾನು ಅಧಿಕಾರ ಪತ್ರ ಬರೆಸಿಕೊಂಡಿರುತ್ತೇನಾ ಎಂದರೆ ಇಲ್ಲ. ಉಳಿದ ವಾದಿಯರನ್ನು ಸಾಕ್ಷ್ಯ ಮಾಡಿಸುತ್ತೇನಾ ಎಂದರೆ ಹೌದು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ಅಂಶಗಳನ್ನು ನಾನೇ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ.

2. ನಮ್ಮ ತಾತ ಕೂರ್ಲಪ್ಪನವರ ವಾರಸುದಾರರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದು ಅವರಿಗೆ ಸೇರಿದ ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ದಿನಾಂಕ 13.11.2009 ರಲ್ಲಿ ನಮ್ಮ ತಂದೆ, ವಾದಿಯರು ಮತ್ತು ಎಲ್ಲಾ ಪ್ರತಿವಾದಿಗಳು ಸೇರಿ 3 ನೇ ಪ್ರತಿವಾದಿ ಬಿ ಮಂಜುನಾಥರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ದಿನಾಂಕ 13.11.2009 ರಂದು 1 ಮತ್ತು 2 ನೇ ಪ್ರತಿವಾದಿಗೆ ನಾನು, ಉಳಿದ ವಾದಿಯರು ಸೇರಿ ನಮ್ಮ ಒಟ್ಟು ಕುಟುಂಬದ ಸ್ವತ್ತನ್ನು 10 ಲಕ್ಷ ಹಣವನ್ನು ಪಡೆದುಕೊಂಡು ಮಾರಾಟ ಮಾಡಿರುತ್ತಾರೆ ಎಂದರೆ ಬರೆಸಿಕೊಂಡರು. ಸಾಕ್ಷಿ ಮುಂದುವರೆದು ನಮಗೆ ಭಾಗ ಕೊಡುತ್ತೇವೆ ಎಂದು ಹೇಳಿ ಮಾಡಿಸಿಕೂಂಡಿರುತ್ತಾರೆ ಎನ್ನುತ್ತಾರೆ. ಆ ಕ್ರಯಪತ್ರದಲ್ಲಿ ಇರುವ ಫೋಟೋಗಳು ನನ್ನದು ಮತ್ತು ಉಳಿದ ವಾದಿಯರದ್ದೇ ಇದೆ. ನಮ್ಮ ಒಟ್ಟು ಕುಟುಂಬದ ಸ್ವತ್ತನ್ನು ತೋರೆದು ಅದರ ಬದಲಿಗೆ 10 ಲಕ್ಷ ಹಣ ಪಡೆದುಕೊಂಡು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ನಾನು ಹಣ ಪಡೆದುಕೊಂಡಿಲ್ಲ ಎನ್ನುತ್ತಾರೆ. ನಾನು ಹಣ ಪಡೆದುಕೊಳ್ಳದೇ ಇರುವ ಬಗ್ಗೆ ನಾನು ದಾಖಲೆ

ಹಾಜರುಮಾಡಿರುತ್ತೇನಾ ಎಂದರೆ ಇಲ್ಲ, ಮುಂದೆ ಹಾಜರುಮಾಡಿರುತ್ತೇನೆ. ನಮ್ಮ ತಂದೆ ಮತ್ತು ನನ್ನ ಸಹೋದರರ ಹೆಸರಿಗೆ ಆಗಿರುವ ಖಾತೆ ಮತ್ತು ಪಹಣಿಯನ್ನು ನಾನು ಪ್ರಶ್ನೆ ಮಾಡಿರುತ್ತೇನಾ ಎಂದರೆ ಇಲ್ಲ. ಪ್ರತಿವಾದಿಗಳು ಭಾಗ ಕೊಡುತ್ತೇನೆ ಎಂದು ಸಹಿ ಪಡೆದುಕೊಂಡು ದಾಖಲೆ ಸೃಷ್ಟಿ ಮಾಡಿರುವ ಬಗ್ಗೆ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನಾ ಎಂದರೆ ಇಲ್ಲ. ಮೋಸದಿಂದ ಬಲವಂತದಿಂದ ದಾಖಲೆ ಬರೆಸಿಕೂಂಡ ಬಗ್ಗೆ ಸದರಿ ದಾಖಲೆಯನ್ನು ರದ್ದುಪಡಿಸಲು ನಾನು ಯಾವುದಾದರೂ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇನಾ ಎಂದರೆ ಇಲ್ಲ.

3. ಉಪ ನೋಂದಾಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಣಾಧಿಕಾರಿಗಳು ನನಗೆ ಹಕ್ಕು ನಿವೃತ್ತಿ ಪತ್ರದಲ್ಲಿ ಬರೆಸಿರುವ ಎಲ್ಲಾ ಅಂಶಗಳನ್ನು ಓದಿ ಹೇಳಿ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾಖಲೆಯನ್ನು ಓದಿ ಹೇಳಿಲ್ಲ ಆದರೆ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ಅವರು ಓದಿ ನನಗೆ ಹೇಳಿಲ್ಲ ಎನ್ನುವ ಬಗ್ಗೆ ಉಪ ನೋಂದಾಣಾಧಿಕಾರಿಗಳನ್ನು ನಾನು ಸಾಕ್ಷ್ಯ ಮಾಡಿಸುತ್ತೇನಾ ಎಂದರೆ ಮಾಡಿಸುತ್ತೇನೆ.

4. 2ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಸ್ವತ್ತುಗಳಲ್ಲಿ 2ನೇ ಪ್ರತಿವಾದಿಯೇರವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಹೌದು. ಅದೇ ಕಾರಣಕ್ಕೆ ನಾನು ನ್ಯಾಯಾಲಯಕ್ಕೆ ಸರಿಯಾದ ಶುಲ್ಕ ಪಾವತಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಹಕ್ಕು ನಿವೃತ್ತ ಪತ್ರ ಬರೆದುಕೊಟ್ಟ ನಂತರ ಭದ್ರಪ್ಪ ಮತ್ತು ಪುಟ್ಟರೇವಯ್ಯನವರೇ ಎಲ್ಲಾ ಸ್ವತ್ತುಗಳ ಮಾಲೀಕರು ಎಂದರೆ ಮೋಸದಿಂದ ಮಾಡಿಕೊಂಡಿರುತ್ತಾರೆ.

ನಾನು ದಾವಾ ಸ್ವತ್ತುಗಳ ಬಗ್ಗೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿದ್ದರೂ ಸಹ ಹಣದ ಆಸೆಗಾಗಿ ಮತ್ತೆ ಭಾಗ ಬರಬೇಕು ಎಂದು ನಾನು ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಎನ್ ಎಸ್ ಕುಲಕರ್ಣಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.